**CW : 5**
PW : 5

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ.

# CC No.497/2025

ದಿನಾಂಕಃ **02.04.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಸಾಕ್ಷಿಯು ನಿಪಿ3 ಮತ್ತು 6 ದಾಖಲೆಗಳನ್ನು ನೋಡಿ ಗುರುತಿಸಿದ್ದು ಅವುಗಳಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ3ಡಿ ಹಾಗಾ ನಿಪಿ6ಬಿ ಎಂದು ಗುರುತಿಸಲಾಯಿತು. ನಾನು ವಿಡಿಯೊಗ್ರಾಫಿ ಮಾಡಿದ ಸಂಬಂಧಿತ ಸಿಡಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಸಿಡಿಯನ್ನು ನೋಡಿ ಗುರುತಿಸಿದು ಅದನ್ನು ಈಗಾಗಲೇ ನಿಪಿ7 ಎಂದು ಗುರುತಿಸಲಾಗಿದೆ.

ಮದ್ಯದ ಸಾ್ಯಚೆಟಗಳನ್ನು ಹಾಗೂ ಪಾ್ಲಸ್ಟಿಕ ಚೀಲವನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಸಮಕ್ಷಮ ಹಾಜರುಪಡಿಸಲಾದ ಮದ್ಯದ ಸ್ಯಾಚೆಟಗಳನ್ನು ಮತ್ತು ಪಾ್ಲಸ್ಟಿಕ ಚೀಲಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಮು ಮಾ 1 ಮತ್ತು 2 ಎಂದು ಗುರುತಿಸಲಾಯಿತು.

ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಸಮಕ್ಷಮ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಪಾಟಿ ಸವಾಲು ಆರೋಪಿ ಪರ ವಕೀಲರಿಂದ ಃ

ನಾವು ಘಟನಾ ದಿನ ಸೆಂಟ್ಯಾರು ಉಪ್ಪಳಿಗೆ, ಇರ್ದೆ, ರೆಂಜ, ನಿಡ್ಪಳಿ ಮಾರ್ಗವಾಗಿ ಕುಕ್ಕುಪುಣಿಗೆ ಹೋಗಿದ್ದೆವು. ರೌಂಡ್ಸ ಕರ್ತವ್ಯದಲ್ಲಿದ್ದಾಗ ಚಾಸಾ1ರವರಿಗೆ ಮಾಹಿತಿ ಬಂದಿದ್ದು ನಾವು ಅವರ ಜೊತೆ ಮಾಹಿತಿ ಬಂದ ಸ್ಥಳಕ್ಕೆ ಹೋಗಿದ್ದೇವೆ. ನಾವು ರೌಂಡ್ಸ ಕರ್ತವ್ಯದಲ್ಲಿದ್ದಾಗ ಮಾಹಿತಿ ಬಂದಿದ್ದು ನಂತರ ನಾವು ಪೋಲಿಸ್ ಠಾಣೆಗೆ ವಾಪಸ್ಸು ಬಂದು ಅಗತ್ಯ ಸಲಕರಣೆ ತಂದು ಮಾಹಿತಿ ತೆಗೆದುಕೊಂಡು ಹೋಗಿದ್ದೇವೆ. ಸೀಜ ಮಾಡಲು ಬೇಕಾದ ಬಟ್ಟೆ ಮತ್ತು ಪೆನ್ನು ಪ್ಯಾಡ ಸೀಲು ಹಾಗೂ ಅಗತ್ಯ ಸಲಕರಣೆಗಳನ್ನು ತೆಗೆದುಕೊಂಡು ಹೋಗಿದ್ದೇವು. ನಮಗೆ ಸಂ.6.45ರ ಸಮಯ ಕುಂಬ್ರದಲ್ಲಿದ್ದಾಗ ಮಾಹಿತಿ ಬಂದಿದೆ. ನಂತರ ಪೊ. ಠಾಣೆಗೆ ವಾಪಸ್ಸು ಬಂದೆವು ಎಂದರೆ ನೆನಪಿಲ್ಲ. ಸಂ 7.55ರ ಸುಮಾರು ನಿಡ್ಪಳ್ಳಿಗೆ ನಾವು ತಲುಪಿದ್ದೇವೆ. ನಮ್ಮ ಇಲಾಹಾ ವಾಹನದಲಿ ಒಟ್ಟು 6 ಜನ ಇದ್ದೆವು.

ಕುಕುಪುಣಿಗೆ ಹೋಗುವ 1 ಕಿ ಮಿ ಹಿಂದೆ ನಿಡ್ಪಳ್ಳಿ ಗ್ರಾಮ ಪಂಚಾಯಿತಿ ಹತ್ತಿರದಿಂದ ಪಂಚರನು ಕರೆದುಕೊಂಡು ಹೋಗಿದ್ದರು. 3-4 ಸಾರ್ವಜನಿಕರು ನಾವು ಸ್ಥಳಕ್ಕೆ ಹೋದಾಗ ಇದ್ದರು. ನಮ್ಮ ವಾಹನದ ಸೈರನ ಕೇಳಿ ಅಲ್ಲಿಂದ ಅವರು ಹೋದರು. ನಾವು ಸಾರ್ವಜನಿಕರನ್ನು 10ಮಿ. ಅಂತರದಿಂದ ನೋಡಿದ್ದೇವೆ. ನಾನು ಇಲಾಖಾ ವಾಹನದ ಹಿಂದಿನ ಸೀಟಿನಲ್ಲಿ ಕುಳಿತ ಕಾರಣ ಆರೋಪಿಯ ಹತ್ತಿರ ಸಾರ್ವಜನಿಕರು ಎಷ್ಟು ಜನ ಇದ್ದರು ಎಂದು ಕಾಣುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಯ ಜೊತೆ ಇದ್ದ ಸಾರ್ವಜನಿಕರು ಯಾರು ಎಂದು ಆರೋಪಿಯನ್ನೇ ಚಾಸಾ5 ರವರು ವಿಚಾರಣೆ ಮಾಡಿದ್ದಾರೆ. ನಮ್ಮ ಇಲಾಖಾ ವಾಹನ ನೋಡಿ ಆರೋಪಿ ಜೊತೆ ಇದ್ದ ಸಾರ್ವಜನಿಕರು ಓಡಿ ಹೋದರು. ಓಡಿ ಹೋದ ಸಾರ್ವಜನಿಕರನ್ನು ಸುತ್ತುವರೆದು ಹಿಡಿಯಲು ಪ್ರಯತ್ನಿಸಿದೆವು ಆದರೆ ಅವರು ಸಿಕ್ಕಿಲ್ಲ.

ಓಡಿ ಹೋದ ಸಾರ್ವಜನಿಕರ ಫೋಟೊವನ್ನು ಮೊಬೈಲ್ ನಲ್ಲಿ ತೆಗೆದಿಲ್ಲ. ಘಟನಾ ಸ್ಥಳದಲ್ಲಿ ಮಹಜರ ಜರುಗಿಸಿದ ನಂತರ ಚಾಸಾ1ರವರು ಪಂಚರ ಸಹಿ ಪಡೆದಿದ್ದಾರೆ. ಆರೋಪಿಯು ಹಳದಿ ಬಣ್ಣದ ಪ್ಲಾಸ್ಟಿಕ ಚೀಲದ ಮದ್ಯದ ಸಾಚೆಟಗಳನ್ನು ಖರೀದಿ ಮಾಡುತ್ತಿದ್ದ. ಆರೋಪಿ ಪುತ್ತೂರು ಕಡೆಯಿಂದ ಅಕ್ರಮ ಲಾಭ ಮಾಡಿಕೊಳ್ಳುವ ಸಲುವಾಗಿ ಮದ್ಯದ ಸಾಚೆಟ್ಗಳನ್ನು ತರಿಸಿಕೊಂಡಿದ್ದಾ ಎಂದು ಗೊತ್ತಾಗಿದೆ. ವಿಡಿಯೊಗ್ರಾಫಿಯನ್ನು ನನ್ನ ಮೊಬೈಲ್ ನಿಂದ ನಾನೇ ಮಾಡಿದ್ದೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ ದೃಡಪತ್ರದಲ್ಲಿ ನನ್ನ ಮೊಬೈಲನ ಮೇಕರ್ಸ ನೇಮ, ಮ್ಯಾನುಫ್ಯಾಕ್ಚರ ನಂಬರ ನಮೂದು ಮಾಡಲಾಗಿದೆ ಸ್ಟೋರೆಜ ಕೆಪ್ಯಾಸಿಟಿ ನಮೂದು ಮಾಡಿಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಡಿವಿಡಿಯಲ್ಲಿರುವ ಚಿತ್ರಗಳು ನನ್ನ ಮೊಬೈಲ್ ನಲ್ಲೇ ಚಿತ್ರೀಕರಣಗೊಂಡವು ಎಂದು ಹೇಳಲು ಸಾಕ್ಷಾಧಾರ ಇದೆ.  ನಾನು ಹಾಜರುಪಡಿಸಿರುವ ಎಲ್ಲ ವಿಡಿಯೊಗ್ರಾಫಿ ಈ ಪ್ರಕರಣಕ್ಕೆ ಸಂಬಂಧಿಸಿದ್ದು ಅಲ್ಲ ಎಂದರೆ ಸರಿಯಲ್ಲ. ನನ್ನ ವಿಡಿಯೊ ಗ್ರಾಫಿಯಲ್ಲಿ ಏನೆಲ್ಲ ಇದೆ ಎಂದರೆ ನೇನಪಿಲ್ಲ. ಸಾಕ್ಷಿ ಮುಂದುವರೆದು ಮಹಜರ ಮಾಡಿದ್ದು ಹಾಗೂ ಮಹಜರ ಸಮಯದಲ್ಲಿ ಮಾಡಿದ ವಿಡಿಯೊ ಹಾಗೂ ಫೋಟೊ ತೆಗೆದದ್ದು ಇರುತ್ತದೆ ಎಂದು ನುಡಿಯುತ್ತಾರೆ. ನಾನು ಮಾಡಿದ ವಿಡಿಯೊಗ್ರಾಫಿಯಲ್ಲಿ ಮಹಜರ ಮಾಡಿದ ಸಂಪೂರ್ಣ ವಿವರ ಇರುತ್ತದೆ. ವಿಡಿಯೊಗ್ರಾಫಿಯನ್ನು ತಕ್ಷೀರು ಸ್ಥಳದಲ್ಲಿ ಮಾಡಿಲ್ಲ ಎಂದರೆ ಸುಳ್ಳು. ನನ್ನ ಮೊಬೈಲದಿಂದ ಫೋಟೊ ತೆಗೆಯಲು ತೊಂದರೆ ಇರಲಿಲ್ಲ.

180 ಎಂ ಎಲ್ ಅಳತೆಯ 17 ಮದ್ಯ ತುಂಬಿದ ಸ್ಯಾಚೆಟಗಳನು ನಮ್ಮ ಮೇಲಾಧಿಕಾರಿ ಆರೋಪಿಯಿಂದ ವಶಪಡಿಸಿಕೊಂಡಿದ್ದಾರೆ. ನಾವು ಆರೋಪಿಯ ಅಂಗಶೊಧನೆ ಮಾಡಿದಾಗ ಆತನ ಹತ್ತಿರ ನಗದು ಹಣ ಇದ್ದ ಬಗೆ  ಗಮನಿಸಿಲ್ಲ. ಆರೋಪಿ ಅಕ್ರಮ ಲಾಭಕ್ಕಾಗಿ ಮದ್ಯ ಮಾರಾಟ ಮಾಡುತ್ತಿದ್ದೆ ಎಂದು ಸುಳುಳ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.  ತಕ್ಷೀರು ನಡೆದ ಸ್ಥಳದ ಹತ್ತಿರ ರಾಧಾಕೃಷ್ಣ ರೈ ಎನ್ನುವವರು ವ್ಯಾಪಾರ ಮಾಡುತ್ತಾರೆ. ಆ ಅಂಗಡಿಯಲ್ಲಿ ಆರೋಪಿ ವ್ಯಾಪಾರ ಮಾಡುತ್ತಾರೆ ಎಂದರೆ

ಸುಳ್ಳು. ನಾವು ಆರೋಪಿ ವ್ಯಾಪಾರ ಮಾಡುತ್ತಿದ್ದ ಅಂಗಡಿಗೆ ಹೋಗಿ ದಾಳಿ ಮಾಡುತ್ತಿದ್ದೇವು ಎಂದರೆ ಸುಳ್ಳು. ಆರೋಪಿ ಅಂಗಡಿಯಲ್ಲಿ ವ್ಯಾಪಾರ ಮಾಡಬಾರದು ಎಂದು ಸುಳ್ಳು ಕೇಸು ದಾಖಲು ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಸಂ.7.55 ರಿಂದ ರಾತ್ರಿ 9.21 ರವರೆಗೆ ತಕ್ಷೀರುನಡೆದ ಸ್ಥಳದಲ್ಲಿದೆವು. ಸುಳ್ಳು ಕೇಸಿಗೆ ಪೂರಕವಾಗಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ದುರುದ್ದೇಷದಿಂದಾಗ ಸುಳ್ಳು ಕೇಸು ದಾಖಲು ಮಾಡಲಾಗಿದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.
ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

1 ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.